**8**

# ಕರ್ನಾಟಕ ಸರ್ಕಾರ

## (ಸಹಕಾರ ಇಲಾಖೆ)

## ಸಹಕಾರಿಗಳ ನಿಬಂಧಕರು, ಕರ್ನಾಟಕ ರಾಜ್ಯ

ನಂ.1, ಅಲಿ ಅಸ್ಕರ್ ರಸ್ತೆ, ಬೆಂಗಳೂರು – 560 052.

## ಇವರ ನಡವಳಿಕೆಗಳು

ನಂ.ಆರ್.ಎಸ್.ಆರ್/ಸೌಕಾ/46/ಎಕ್ಸ್‌ಎಂ.ಸಿ/2005–06 ದಿನಾಂಕ : 15.6.2005

ಗೆ,

1. ಎಲ್ಲಾ ಪ್ರಾಂತಗಳ ಸಹಕಾರಿಗಳ ಸಂಯುಕ್ತ ನಿಬಂಧಕರು
2. ಎಲ್ಲಾ ಜಿಲ್ಲೆಗಳ ಸಹಕಾರಿಗಳು ಉಪ ನಿಬಂಧಕರು
3. ಎಲ್ಲಾ ಉಪ ವಿಭಾಗಗಳ ಸಹಕಾರಿಗಳ ಸಹಾಯಕ ನಿಬಂಧಕರು

ಮಾನ್ಯರೇ,

**ವಿಷಯ:** ಸೌಹಾರ್ದ ಸಹಕಾರ ಕಾಯ್ದೆ ಅಡಿಯ ಸಹಕಾರಿಗಳ ಅಮಾನತ್ ಖಾತೆಯ ಹಣವನ್ನು ಸಹಕಾರಿಯ ನೋಂದಣಿ ನಂತರ ಸಹಕಾರಿಯ ಖಾತೆಗೆ ವರ್ಗಾಯಿಸುವ ಕುರಿತು.

**ಉಲ್ಲೇಖ:** ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ., ಬೆಂಗಳೂರು ಇವರ ಪತ್ರ ಸಂಖ್ಯೆ : 34/2005–06 ದಿನಾಂಕ 29.4.2005.

ರಾಜ್ಯದ ಅನೇಕ ಕಡೆ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಡಿ ನೋಂದಣಿಯಾಗುವ ಸಹಕಾರಿಗಳ ನೋಂದಣಿ ಪೂರ್ವದಲ್ಲಿ ಸಂಗ್ರಹಿಸಲಾಗುವ ಷೇರು ಹಣವನ್ನು ಯಾವುದಾದರೂ ಸಹಕಾರಿ ಬ್ಯಾಂಕಿನ ಅಮಾನತ್ ಖಾತೆಯಲ್ಲಿ ತೊಡಗಿಸಲಾಗುತ್ತಿದೆ. ಸಹಕಾರಿಯ ನೋಂದಣಿ ನಂತರ ಸಹಕಾರಿಯ ಖಾತೆಗೆ ವರ್ಗಾವಣೆ ಮಾಡಲು ಅನುಮತಿ ನೀಡುವಾಗ ಸಹಕಾರಿಯ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಂದ ರೂ. 20,000,00ಗಳ ಭದ್ರತಾ ಠೇವಣಿ ಮಾಡಿಸಿಕೊಳ್ಳಲು ಒತ್ತಾಯ ಪಡಿಸುತ್ತಿರುವುದಾಗಿ ಉಲ್ಲೇಖಗಳೊಂದಿಗೆ ಸಂಯುಕ್ತ ಸಹಕಾರಿಯ ವ್ಯವಸ್ಥಾಪಕ ನಿರ್ದೇಶಕರು,

ಈ ಕಛೇರಿಯ ಗಮನಕ್ಕೆ ತಂದ, ಈ ಬಗ್ಗೆ ಅಧೀನ ಕಚೇರಿಗಳಿಗೆ ಸೂಕ್ತ ತಿಳುವಳಿಕೆ ನೀಡಲು ಕೋರಿರುತ್ತಾರೆ.

ಈ ಮೇಲಿನ ಹಿನ್ನೆಲೆಯಲ್ಲಿ ಸಹಕಾರಿಯ ನೋಂದಣಿ ನಂತರ ಸಹಕಾರಿಗಳ ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳಿಂದ ಭದ್ರತಾ ಠೇವಣಿ ಮಾಡಲು ಇಲಾಖಾಧಿಕಾರಿಗಳು ಆಗ್ರಹ ಮಾಡಬಾರದೆಂದು ತಿಳಿಸಲು ಮಾನ್ಯ ಸಹಕಾರಿಗಳ ನಿಬಂಧಕರಿಂದ ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

ಸಹಿ/–
**(ಎನ್. ಎಂ. ಪಾಟೀಲ್)**
ಸಹಕಾರಿಗಳ ಸಂಯುಕ್ತ ನಿಬಂಧಕರು
(ಕೇಂದ್ರಸ್ಥಾನ)